

ಮುಟ್ಟಿ ನೋಡಿದಾಗ ಸುಡುತ್ತಿತ್ತು. ತಂದೆಯನ್ನು ನೋಡಿ ಅಳತೊಡಗಿದ ಸುರಭಿಯನ್ನು ನೋಡಿದ ಸುಮೀತನಿಗೆ ಸಿಟ್ಟು ತಡೆಯಲಾಗಿರಲಿಲ್ಲ.

ಸುಮೀತ ಕೆಳಗಿಳಿದು ಬಂದಿದ್ದ. ಇನ್ನೂ ಅವಳ ಕೆಲಸ ನಡೆದೇ ಇತ್ತು. ಅವಳು ಅವನಿಗೆ ಏನೋ ಹೇಳಬೇಕೆನ್ನುವಷ್ಟರಲ್ಲಿ ಎಲ್ಲರ ಮುಂದೆಯೇ ಅವನು ಸುಹಾಸಿನಿಗೆ 'ನಿನಗ ಕೂಸಿನ ಹೆಲ್ತಿಗಿಂತ ನಿನ್ನ ಕೆಲಸಾನ ಹೆಚ್ಚಾತೇನು? ಸಾಕು ಮುಗಿಸು...' ಎಂದು ಕೂಗಾಡಿದರೂ ಆಕೆ ಅವನನ್ನು ತಡೆದು 'ಐದೇ ನಿಮಿಷ, ಬಂದೆ' ಎಂದು ಹೇಳಿ ಮೇಲೆ ಕಳಿಸಿದ್ದಳು. ಸುಮೀತ ಹೀಗೆ ಕೋಪದಿಂದ ಎಲ್ಲರ ಎದುರು ಕೂಗಾಡಿದುದು ಸುಹಾಸಿನಿಗೆ ಇಷ್ಟವಾಗಿರಲಿಲ್ಲ. ಆದರೂ ಎಲ್ಲರೆದುರು ಸೀನ್ ಕ್ರಿಯೇಟ್ ಮಾಡಲು ಅವಳು ಇಷ್ಟಪಟ್ಟಿರಲಿಲ್ಲ. ತನ್ನ ಕೆಲಸವನ್ನು ಮುಗಿಸಿದ ಸುಹಾಸಿನಿ ಮೇಲೆ ಬಂದಾಗ 9 ಗಂಟೆ ಆಗಿತ್ತು. ಮಗುವಿಗೆ ಕೆಮ್ಮಿನ ಔಷಧಿ ಹಾಕಿ ಸ್ವಲ್ಪ ಗಂಜಿ ಕುಡಿಸಿ ಮಲಗಿಸಿದ್ದಳು. ನಂತರ ಅಡುಗೆ ಮನೆಗೆ ಹೋದಾಗ ಅತ್ತೆ ಸುಮನ್ ಚಪಾತಿ ಮಾಡುತ್ತಲಿದ್ದರು. ಸುಹಾಸಿನಿ ಬಿಸಿ ಬಿಸಿ ಚಪಾತಿಯನ್ನು ಸುಮೀತನ ತಟ್ಟೆಗೆ ಹಾಕಲು ಹೋದಾಗ ಅವನು ಕೋಪದಿಂದ 'ಯಾಕ ಬಂದಿ? ಈಗೂ ಹೋಗಿ ಕೆಲಸಾ ಮಾಡು. ಗಂಡಾ, ಮಗಳಿಗಿಂತಾ ನಿನಗ ನಿನ್ನ ಕೆಲಸಾನ ಹೆಚ್ಚಾತು...' ಎಂದು ಕೂಗಾಡಿದ್ದನು.

'ಅಲ್ಲಾ, ಅಷ್ಟು ಮಂದೀ ಮುಂದ ನನ್ನ ಮರ್ಯಾದಿ ಇರಲಾರದವರಂಗ ಒದರಾಡಿದ್ರೆಲಾ... ಅವರು ನನ್ನ ಬಗ್ಗೆ ಅಂತೂ ಬಿಡ್ರಿ. ನಿಮ್ಮ ಬಗ್ಗೆರೆ ಏನ ತಿಳಕೋಬೇಕು?'

'ಏನರೆ ತಿಳಕೊಳ್ಳಿ. ನನಗೇನು? ನನಗ ನನ್ನ ಮಗಳ ಆರೋಗ್ಯ ಮುಖ್ಯ'

'ನನಗೂ ಮಗಳ ಆರೋಗ್ಯ ಮುಖ್ಯ ಅದ. ನಾ ಹಡದ ಅವ್ವ ಇದ್ದೇನಿ. ನಡುವ ಒಮ್ಮೆ ಬಂದು ಹೋಗೇನಿ. ಅಕೀಗೆ ಔಷಧನೂ ಕುಡಿಸಿ ಹೋಗಿದ್ದೆ. ಅಮ್ಮ ಹೇಳಿಲ್ಲೇನು? ಯಾಕರಿ ಅಮ್ಮಾ?' ಸುಮನ್ ಏನು ಹೇಳಬೇಕೆಂದು ತಿಳಿಯದೆ ಸುಮ್ಮನೆ ನಿಂತಿದ್ದರು.

'ಅಲ್ಲಾ, ಸುರಭಿ ನನಗ ಒಬ್ಬಾಕಿಗೇ ಮಗಳಲ್ಲಾ. ನಿನಗೂ ಮಗಳೇ ಅಲ್ಲೇನು? ನೀನೂ ಅಕೀ ಕಾಳಜೀ ತೊಗೋಬೇಕಾಗಿತ್ತು? ಒಂದು ದಿನಾ ರಜಾ ಹಾಕಬೇಕಾಗಿತ್ತು?'

ಸುಮೀತನಿಗೆ ಈಗ ಸಿಟ್ಟು ನೆತ್ತಿಗೇರಿತ್ತು. ಎದ್ದವನೇ ಸುಹಾಸಿನಿಗೆ ಕಪಾಳಿಗೆ ಹೊಡೆದಿದ್ದ. ಸುಮನ್ ಹಾಗೂ ರಾಮನಾಥ ಇಬ್ಬರಿಗೂ ಸುಮೀತನ ವರ್ತನೆಯಿಂದ ಆಘಾತವಾದಂತಾಗಿತ್ತು. ಅವರು ಗರಬಡಿದವರಂತೆ ನಿಂತಿದ್ದರು.

ಸುಹಾಸಿನಿಗೆ ಸುಮೀತನು ಕಪಾಳಿಗೆ ಹೊಡೆದದ್ದು ನೋವಿಗಿಂತಲೂ ಹೆಚ್ಚಾಗಿ ಅಪಮಾನವಾಗಿತ್ತು. ಅವಳಿಗೆ ಸಿಟ್ಟು ಉಕ್ಕಿಬಂದಿತ್ತು. ಆಕೆ ಕೈಯಲ್ಲಿದ್ದ ಉಕ್ಕಿನ ಇಕ್ಕುಳವನ್ನು ಸುಮೀತನ ಕಡೆಗೆ ಎಸೆದಿದ್ದಳು. ಸುಮೀತನು ಅದರಿಂದ ತಪ್ಪಿಸಿಕೊಂಡಿದ್ದನು. ಆದರೆ ರಾಮನಾಥರಿಗೆ ಇದು ಸ್ವಲ್ಪ ಅತಿ ಎನ್ನಿಸಿತ್ತು. ಅವರು ಇಬ್ಬರನ್ನೂ ಗದರಿಸಿ 'ನಿಮ್ಮ ಜಗಳಾನೆ ಇರಲಿ. ಪ್ರೀತಿನ ಇರಲಿ, ನಿಮ್ಮ ರೂಮಿನ್ಯಾಗ ಇರಬೇಕು. ಮೂರನೇದವರ ಮುಂದ ಆಗಬಾರದು...' ಎಂದು ಸಿಟ್ಟಿನಿಂದ ಹೇಳಿದ್ದರು. ಎಲ್ಲರೂ ಊಟವನ್ನೆ ಮಾಡದೆ ತಮ್ಮ ತಮ್ಮ ರೂಮಿಗೆ ಹೋಗಿದ್ದರು.

***

ಬೆಳಿಗ್ಗೆ, ಸುಮೀತನು ಏಳುವುದಕ್ಕೂ ಮೊದಲೇ ಸುಹಾಸಿನಿಯು ಯಾರಿಗೂ ಹೇಳದೆ ಮಗಳು ಸುರಭಿಯೊಂದಿಗೆ ತನ್ನ ತಾಯಿಯ ಮನೆಗೆ ಹೋಗಿಬಿಟ್ಟಿದ್ದಳು. ಅವಳು ಎಲ್ಲಿ ಹೋಗಿರುವಳೆಂದು ಸುಮೀತನಿಗೆ ಹಾಗೂ ಸುಮನ್ ಹಾಗೂ ರಾಮನಾಥರಿಗೂ ಕೂಡ ಅತ್ಯಂತ ಚಿಂತೆಯಾಗಿಬಿಟ್ಟಿತ್ತು. ಸುಮೀತನು ಸುಹಾಸಿನಿಗೆ ಫೋನ್ ಮಾಡಿದರೆ ಅವಳ ಮೊಬೈಲ್ ಸ್ವಿಚ್ ಆಫ್ ಆಗಿತ್ತು. ಮತ್ತೆ ಮತ್ತೆ ಪ್ರಯತ್ನಿಸಿದಾಗಲೂ ಸಂಪರ್ಕ ಸಿಗಲಿಲ್ಲ. ಸುಮೀತನು ತನ್ನ ವರ್ತನೆಯಿಂದ ನೊಂದಿದ್ದನು. ಸುಮನ್ ಹಾಗೂ ರಾಮನಾಥರು ಮಗನನ್ನೇ ಬೈದಿದ್ದರು. ಸುಹಾಸಿನಿಯು ಸುರಕ್ಷಿತವಾಗಿರಲಿ ದೇವರೆ ಎಂದು ದೇವರನ್ನು ಬೇಡಿಕೊಂಡ ಸುಮೀತನು ಎಲ್ಲಿದ್ದರೂ ಅವಳ ಕ್ಷಮೆ ಕೇಳಿ ಮನೆಗೆ ಕರೆದುಕೊಂಡು ಬರಲು ತನ್ನ ಮನಸ್ಸಿನಲ್ಲಿ ನಿರ್ಧರಿಸಿದ್ದನು. ರಾತ್ರಿ 8 ಗಂಟೆಯವರೆಗೂ ಸುಹಾಸಿನಿ ಮತ್ತು ಸುರಭಿಯ ಸುಳಿವು ಸಿಗದಿದ್ದಾಗ, ಸುಮೀತನು ಸುಹಾಸಿನಿಯ ತಂದೆಗೆ ಕರೆ ಮಾಡಿದ್ದನು. ಅವರು ಅಳಿಯನ ವರ್ತನೆಯನ್ನು ಖಂಡಿಸಿದ್ದರು ಮತ್ತು ಅವರಿಬ್ಬರನ್ನೂ ಅವನ ಹತ್ತಿರ ಕಳಿಸುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿದ್ದರು. ಸುಹಾಸಿನಿ ತನ್ನ ತವರಿನಲ್ಲಿ ಸುರಕ್ಷಿತವಾಗಿದ್ದಾಳೆ ಎಂದು ಸುಮೀತನಿಗೆ ಸಮಾಧಾನವಾಯಿತು, ಆದರೆ ಸುಹಾಸಿನಿಯ ತಂದೆಯ ಮಾತುಗಳು ಅವನಿಗೆ ನೋವುಂಟುಮಾಡಿದ್ದವು.

ಮರುದಿನ ಬೆಳಿಗ್ಗೆ, ಸುಮೀತ ತನ್ನ ಹೆತ್ತವರೊಂದಿಗೆ ಸುಹಾಸಿನಿಯ ಮನವೊಲಿಸಿ ಅವಳನ್ನು ಮರಳಿ ಕರೆತರಲು ತನ್ನ ಕಾರಿನಲ್ಲಿ ಅವರ ಮನೆಗೆ ಹೋಗಿದ್ದನು. ಆದರೆ ಅಲ್ಲಿಯ ಪರಿಸ್ಥಿತಿಯೇ ಬೇರೆ ಆಗಿತ್ತು. ಸುಹಾಸಿನಿಯ ಅಣ್ಣ ನಿತಿನ್ ಅವನನ್ನು ಬಾಗಿಲಲ್ಲಿಯೇ ತಡೆದಿದ್ದನು. ತನ್ನ ಸಂಸಾರವು ಹಾಳಾಗಲು ಬಿಡುವುದಿಲ್ಲ, ತಂಗಿಗೆ ಬುದ್ಧಿ ಹೇಳಿ ಕೊಟ್ಟು ಕಳಿಸುತ್ತಾನೆ ಎಂದು ಗೆಳೆಯನಾಗಿದ್ದ ನಿತಿನ್ ಮೇಲೆ ಸುಮೀತನಿಗೆ ನಂಬಿಕೆಯಿತ್ತು. ಆದರೆ ಅವನು ಸುಮೀತನನ್ನು ಹಾಗೂ ಜೊತೆಗೆ ಅವನ ಹೆತ್ತವರನ್ನು ಕೂಡ ಅವಮಾನಿಸಿ, ಅವರನ್ನು ಬಾಗಿಲಿನಿಂದಲೇ ಹಿಂತಿರುಗುವಂತೆ ಮಾಡಿದ್ದನು.

ಸುಹಾಸಿನಿಯ ತಾಯಿ ಸುನೀತಾ ಅವರನ್ನು ಸ್ವಾಗತಿಸಲು ಬಂದಾಗ ನಿತಿನನು ಅವಳನ್ನು ಗದರಿಸಿ ಮನೆಯೊಳಗೆ ಕಳಿಸಿದ್ದನು. ಸುಮೀತನಿಗೆ ತನ್ನ ಹೆತ್ತವರ ಅವಮಾನವನ್ನು ಸಹಿಸುವುದಾಗಿರಲಿಲ್ಲ. ಇಷ್ಟೆಲ್ಲ ಆದರೂ ಸುಹಾಸಿನಿ ಹೊರಗೆ ಬಾರದುದು ಕೂಡ ಅವನಿಗೆ ಕೆಡುಕೆನ್ನಿಸಿತ್ತು.ಅವನು ಭಾರವಾದ ಹೃದಯದಿಂದ ಕಾರನ್ನು ಮನೆಯ ಕಡೆಗೆ ತಿರುಗಿಸಿದ್ದನು. ಸುಮೀತನಿಗೆ ತಾವು ಮದುವೆಯ ಮಾತುಕತೆಯಾಡಲು ಹೋದಾಗಿನ ಸಂದರ್ಭವು ನೆನಪಾಗಿತ್ತು. ಮದುವೆಯ ನಂತರವೂ ಅವರ ಮನೆಗೆ ಯಾವಾಗ ಹೋದರೂ ಅತ್ಯಂತ ಆದರ ಸತ್ಕಾರವು ನಡೆಯುತ್ತಿತ್ತು. ಈಗ ಅದೆಲ್ಲವೂ ಬದಲಾಗಿಹೋಗಿತ್ತು.

ಇತ್ತೀಚೆಗೆ ಸುಮೀತನ ದಿನಚರಿ ಬದಲಾಗಿತ್ತು. ಮೊದಲು ಆಫೀಸಿಗೆ ಹೊರಡುವಾಗ ಸುಹಾಸಿನಿಯು ಅವನಿಗಾಗಿ ತಾನೇ ಹೊಸ ಹೊಸ ರೀತಿಯ ಅಡುಗೆ ಮಾಡಿ ಡಬ್ಬಿ ಕೊಡುತ್ತಿದ್ದಳು. ಸುರಭಿಯೂ ಕೂಡ ಅವನು ಆಫೀಸಿಗೆ ಹೊರಟರೆ ಟಾಟಾ ಬೈ ಎಂದು ಮುದ್ದುಮುದ್ದಾಗಿ ಹೇಳುತ್ತಿದ್ದಳು. ಸಂಜೆಯೂ ಅಷ್ಟೇ. ಹೆಂಡತಿ ಹಾಗೂ ಮಗಳ ಮುಖ ನೋಡಿದೊಡನೆ ಅವನ ಆಯಾಸವೆಲ್ಲವೂ ಕರಗಿಬಿಡುತ್ತಲಿತ್ತು. ಸುರಭಿಯಿಂದಾಗಿ ಇಡೀ ಮನೆಯೇ ತುಂಬಿದಂತಿರುತ್ತಿತ್ತು. ಆದರೆ ಈಗ ಎಲ್ಲವೂ ಖಾಲಿ ಖಾಲಿ. ಅವನು ಒಮ್ಮೊಮ್ಮೆ ರಾತ್ರಿಯಿಡೀ ತನ್ನ ಮೊಬೈಲ್‌ನಲ್ಲಿದ್ದ ಅವರಿಬ್ಬರ ಫೋಟೊ ನೋಡುತ್ತಾ ಕಳೆಯುತ್ತಿದ್ದನು. ಈ ಒಂಟಿತನದಿಂದಾಗಿ, ಅವನಿಗೆ ತನ್ನ ಮಲಗುವ ಕೋಣೆಯೂ ಕೂಡ ಜೈಲಿನಂತೆನ್ನಿಸುತ್ತಲಿತ್ತು.

ಸುಹಾಸಿನಿಯ ಪರಿಸ್ಥಿತಿಯೂ ಕೂಡ ಇದಕ್ಕೆ ಹೊರತಾಗಿರಲಿಲ್ಲ. ಆದರೆ ಅವಳಿಗೆ ತನ್ನ ಅಣ್ಣ ನಿತಿನನ ಮೇಲೆ ಸಂಪೂರ್ಣ ನಂಬಿಕೆ. ಅವನು ಸುಮೀತನಿಗೆ ಬುದ್ಧಿ ಬರುವಂತೆ ಮಾಡಿ ತನ್ನನ್ನು ತನ್ನ ಮನೆಗೆ ಕರೆದುಕೊಂಡು ಹೋಗುವಂತೆ ಮಾಡುತ್ತಾನೆ ಎಂಬ ಭರವಸೆ ಅವಳಿಗಿತ್ತು. ಸುಮೀತನು ಸುಹಾಸಿನಿಗೆ ಸಾಕಷ್ಟು ಬಾರಿ ಕರೆ ಮಾಡಿದ್ದನು. ಅವಳು ಉತ್ತರಿಸದಾದಾಗ ಮೆಸೇಜ್ ಕೂಡ ಕಳುಹಿಸುತ್ತಿದ್ದನು. ಆದರೆ ನಿತಿನ್